

# ಮೇಘಾ ಸಂದೇಶ



'ಜೊತೆಜೊತೆಯಲಿ' ಧಾರಾವಾಹಿ ನಂತರ ಸಿನಿಮಾಗಳೆಡೆಗೆ ಹಾದಿ ಬದಲಿಸಿದ್ದ ನಟಿ ಮೇಘಾ ಶೆಟ್ಟಿ, 'ಕೈವಾ', 'ತ್ರಿಬ್ಬಲ್ ರೈಡಿಂಗ್', 'ದಿಲ್‌ಪಸಂದ್' ಸಿನಿಮಾಗಳ ಮೂಲಕ ಬೆಳ್ಳಿತೆರೆಯಲ್ಲಿಯೂ ಮಿಂಚಿದ್ದರು. ಈಗ ಬೇರೆ ಸಿನಿಮಾರಂಗದಲ್ಲಿಯೂ ತಮ್ಮ ಅದೃಷ್ಟಪರೀಕ್ಷೆ ನಡೆಸಲು ಮುಂದಾಗಿದ್ದಾರೆ.

ಸದ್ಯ ತಮಿಳು ಸಿನಿಮಾರಂಗಕ್ಕೆ ಪದಾರ್ಪಣೆ ಮಾಡುತ್ತಿರುವ ಅವರು, 'ಕಾಲೈಯನ್' ಸಿನಿಮಾದಲ್ಲಿ ನಟಿಸುತ್ತಿದ್ದು, ಈ ಸಿನಿಮಾ ತಮಗೆ ಬ್ರೇಕ್ ನೀಡುವ ನಿರೀಕ್ಷೆಯನ್ನೂ ವ್ಯಕ್ತಪಡಿಸಿದ್ದಾರೆ.

'ಸಿನಿಮಾ ಎನ್ನುವುದು ತನ್ನದೇ ಒಂದು ವಿಶೇಷ ಅಭಿವ್ಯಕ್ತ ಶಕ್ತಿ ಹೊಂದಿರುತ್ತದೆ. ಸಿನಿಮಾ ಎನ್ನುವುದೇ ಒಂದು ಭಾಷೆ. ನನಗೆ ಬೇರೆ ಬೇರೆ ಸಿನಿಮಾರಂಗಗಳಲ್ಲಿ ಕೆಲಸ ಮಾಡಿದೆ ಎನ್ನಿಸಿಕೊಳ್ಳುವುದಕ್ಕಿಂತ ಅದರಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳುವ ಹಾಗೂ ಆ ಪಾತ್ರಗಳಿಗೆ ಜೀವ ತುಂಬುವ ಅನುಭವಗಳು ಬೇಕು' ಎಂದಿದ್ದಾರೆ.

'ಬೇರೆ ಸಿನಿಮಾರಂಗದಲ್ಲಿ ನಟಿಸುವುದು ಹೊಸ ನಟನಾ ಕೌಶಲವನ್ನು, ತಂತ್ರಗಳನ್ನು ಕಲಿಯಲು ಉತ್ತಮ ಅವಕಾಶವಾಗುತ್ತದೆ. ಭಿನ್ನ ರೀತಿಯ ಜನರೊಂದಿಗೆ ಬೆರೆಯುವುದನ್ನು ಕಲಿಸುತ್ತದೆ. ನನಗೆ ತಮಿಳು ಗೊತ್ತಿರುವುದರಿಂದ ಆ ಸಂಸ್ಕೃತಿಯೊಂದಿಗೆ ಬೆರೆಯಲು ಸಾಧ್ಯ ಹಾಗೂ ಆ ಪಾತ್ರದಲ್ಲಿ ಸಂಪೂರ್ಣ ತೊಡಗಿಕೊಳ್ಳುವ ವಿಶ್ವಾಸ ನನ್ನಲ್ಲಿದೆ' ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ.

ಸದ್ಯ ಕನ್ನಡದಲ್ಲಿ ವಿನಯ್ ರಾಜ್‌ಕುಮಾರ್ ಅವರೊಂದಿಗೆ 'ಗ್ರಾಮಾಯಣ' ಹಾಗೂ ಪ್ರಜ್ವಲ್ ದೇವರಾಜ್ ಜೊತೆ 'ಚೀತಾ' ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅವರ ಅಭಿನಯದ 'ಆಪರೇಷನ್ ಲಂಡನ್ ಕೆಫೆ' ಬಿಡುಗಡೆಯಾಗಬೇಕಿದ್ದು, ಕನ್ನಡ ಹಾಗೂ ತೆಲುಗಿನ ಎರಡು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ■

# ಹಾರಲು ಸಜ್ಜಾದ ಫೈರ್‌ಫ್ಲೈ

ನಟ ಶಿವರಾಜ್‌ಕುಮಾರ್ ಪುತ್ರಿ ನಿವೇದಿತಾ ಶಿವರಾಜ್‌ಕುಮಾರ್ ಚೊಚ್ಚಿಲ ನಿರ್ಮಾಣದಲ್ಲಿ ಮೂಡಿಬರುತ್ತಿರುವ 'ಫೈರ್‌ಫ್ಲೈ' ಸಿನಿಮಾ ಏಪ್ರಿಲ್ 24ರಂದು ಬಿಡುಗಡೆಯಾಗಲು ಸಜ್ಜಾಗಿದೆ.

ತಮ್ಮ ತಾತ, ವರನಟ ರಾಜ್‌ಕುಮಾರ್ ಅವರ ಜನ್ಮದಿನದಂದೇ ತಮ್ಮ ನಿರ್ಮಾಣದ ಚೊಚ್ಚಿಲ ಸಿನಿಮಾವನ್ನು ತೆರೆಗೆ ತರಲು ನಿವೇದಿತಾ ಶಿವರಾಜ್‌ಕುಮಾರ್ ನಿರ್ಧರಿಸಿದ್ದಾರೆ. ವಂಶಿ ನಟಿಸಿ ನಿರ್ದೇಶಿಸಿರುವ 'ಫೈರ್‌ಫ್ಲೈ' ಸಿನಿಮಾ ಟೀಸರ್ ಈಚೆಗೆ ಬಿಡುಗಡೆಗೊಂಡಿದ್ದು, ಗಮನಸೆಳೆಯುವಂತಿದೆ. ವಂಶಿಗೆ ಜೋಡಿಯಾಗಿ ರಚನಾ ಇಂದರ್ ನಟಿಸುತ್ತಿದ್ದು, ಅಚ್ಯುತ್ ಕುಮಾರ್, ಸುಧಾರಾಣಿ, ಶೀತಲ್ ಶೆಟ್ಟಿ, ಆನಂದ್ ನೀನಾಸಂ, ಮೂಗು ಸುರೇಶ್ ಮುಂತಾದವರು ಸಿನಿಮಾದಲ್ಲಿದ್ದಾರೆ.

ಶ್ರೀ ಮುತ್ತು ಸಿನಿ ಸರ್ವೀಸ್ ಆ್ಯಂಡ್ ಪ್ರೊಡಕ್ಷನ್ಸ್‌ನಡಿ ಈ ಸಿನಿಮಾ 2023ರ ಜೂನ್‌ನಲ್ಲಿ ಸೆಟ್ಟೇರಿದ್ದು, ಎರಡು ವರ್ಷಗಳ ನಂತರ ತೆರೆಗೆ ಸಿದ್ಧವಾಗಿದೆ.

'ಅಪ್ಪಾಜಿಯ ಜನ್ಮದಿನದಂದೇ ನನ್ನ ಮಗಳ ಮೊದಲ ಚಿತ್ರ ಬಿಡುಗಡೆಯಾಗುತ್ತಿರುವುದು ವಿಶೇಷ ಕ್ಷಣ. ಫೈರ್‌ಫ್ಲೈ ಸಾವು, ನೋವು ಮತ್ತು ಜೀವನಸ್ಫೂರ್ತಿಯ ಮರುಹುಟ್ಟಿನ ಬಗ್ಗೆ ಮಾತನಾಡುವ ಚಿತ್ರ. ಗಾಢವಾದ ವಿಷಯವನ್ನು ಸರಳವಾಗಿ, ಹಾಸ್ಯದ ಮೂಲಕ ನಿರ್ದೇಶಕರು ಹೇಳಹೊರಟಿರುವುದು ನನಗೆ ಬಹಳ ಹಿಡಿಸಿತು' ಎಂದು ನಟ ಶಿವರಾಜ್‌ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ■





# ವಿಭಿನ್ನ ಗೆಟಪ್‌ನಲ್ಲಿ ಡಾಲಿ

ನಾಗಭೂಷಣ್ ಹಾಗೂ ಮಲೈಕಾ ವಸುಪಾಲ್ ನಟಿಸಿರುವ 'ವಿದ್ಯಾಪತಿ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಅಷ್ಟೇ ಅಲ್ಲ, ಸಿನಿಮಾದಲ್ಲಿ ಡಾಲಿ ಧನಂಜಯ್ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಳ್ಳುತ್ತಿರುವುದು ವಿಶೇಷವಾಗಿದೆ.

ನಟ ಧನಂಜಯ್, ಈ ಸಿನಿಮಾದಲ್ಲಿ 'ಅನಕೊಂಡ' ಎಂಬ ಭಿನ್ನವಾದ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಸ್ಪೆಷಲ್ ರೋಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಭಿನ್ನ ಲುಕ್ ಹಾಗೂ ಪರ್ಫಾರ್ಮೆನ್ಸ್ ಮೂಲಕ ರಂಜಿಸುವ ಸೂಚನೆ ನೀಡಿದ್ದಾರೆ.

ಕಾಮಿಡಿ ಡ್ರಾಮಾ ಕಥೆಯ ವಿದ್ಯಾಪತಿ ಏಪ್ರಿಲ್ 10ಕ್ಕೆ ರಿಲೀಸ್ ಆಗುತ್ತಿದ್ದು, ಇಶಾಂ ಹಾಗೂ ಹಸೀಂ ಖಾನ್ ನಿರ್ದೇಶನದಲ್ಲಿ ಸಿನಿಮಾ ಮೂಡಿಬರುತ್ತಿದೆ. ಈ ಸಿನಿಮಾ ನಿರ್ಮಾಣ ಡಾಲಿ ಪಿಕ್ಚರ್ಸ್ ಸಂಸ್ಥೆಯದ್ದಾಗಿದೆ.

ಈ ಸಿನಿಮಾ ಕುರಿತು ಮಾತನಾಡಿರುವ ಡಾಲಿ, ''ವಿದ್ಯಾಪತಿ' ಒಂದು ಕೌಟುಂಬಿಕ ಸಿನಿಮಾ. ಮನರಂಜನೆ ಭರಪೂರವಿದೆ'' ಎಂದಿದ್ದಾರೆ. ■